ದಿನಾಂಕಃ 04-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- 2 ನೇ ಎದುರುದಾರರ ಪರವಾಗಿ ಶ್ರೀ. ಎಂ.ಇ.ಎನ್. ವಕೀಲರಿಂದಃ-**

ನನಗೆ 66 ವರ್ಷ ವಯಸ್ಸಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ 53 ವರ್ಷ ವಯಸ್ಸಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ಹೋಗುತ್ತಿದ್ದೆನು. ಆ ದಿನ ನಾನು ಕೆ.ಆರ್.ಬಡಾವಣೆಯಿಂದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ಹೋಗುತ್ತಿದ್ದೆನು. ಆ ದಿನ ನಾನು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ನನ್ನ ಹೆಸರಿನಲ್ಲಿದೆ ಆದರೆ ಅದರ ನಂಬರ್ ನನಗೆ ಗೊತ್ತಿಲ್ಲ. ಆ ವಾಹನ ಚಲಾಯಿಸಲು ನನಗೆ ಚಾಲನಾ ಪರವಾನಗಿ ಇದೆ. ಆ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಮತ್ತು ತಿಪ್ಪೇಸ್ವಾಮಿರವರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆವು. ನಾನು ವ್ಯವಸಾಯ ಮಾಡುತ್ತೇನೆ. ಫ್ರಾಸಾ.2 ರವರು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಾರೆ. ಈ ಅಪಘಾತ ಕೆ.ಆರ್.ಬಡಾವಣೆ ಹತ್ತಿರ ಆಗಿರುತ್ತದೆ. ಅಪಘಾತವಾದ ರಸ್ತೆ 60 ಅಡಿ ಅಗಲ ಇದೆ ಎಂದರೆ ಸರಿ. ಆ ವಾಹನ ನಮ್ಮ ದ್ವಿಚಕ್ರ ವಾಹನಕ್ಕೆ ಎದುರುಗಡೆಯಿಂದ ಬಂದು ಅಪಘಾತಪಡಿಸಿರುತ್ತದೆ ಅಪಘಾತವಾದ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿ. ಆ ದಿನ ನಾನು ಬೈಕನ್ನು ಅಡ್ಡಾದಿಡ್ಡಿ ಚಲಾಯಿಸಿದ ಕಾರಣ ಈ ಅಪಘಾತವಾಗಿರುತ್ತದೆ ಎಂದರೆ

ಸರಿಯಲ್ಲ. ನಮಗೆ ಅಪಘಾತಪಡಿಸಿದ ವಾಹನ ವಿದ್ಯಾನಿಧಿ ಶಾಲೆಯ ವಾಹನವಾಗಿರುತ್ತದೆ. ಆ ವಾಹನದ ನಂಬರ್ ನನಗೆ ಗೊತ್ತಿಲ್ಲ. ಈ ಅಪಘಾತಕ್ಕೆ ನಾನೇ ಪೊಲೀಸರಿಗೆ ದೂರು ನೀಡಿರುತ್ತೇನೆ. ಈ ಅಪಘಾತದಿಂದ ನನ್ನ ಎಡಭುಜಕ್ಕೆ ಮತ್ತು ಎಡ ಹೊಟ್ಟೆಗೆ ಗಾಯಗಳಾಗಿದ್ದವು. ಈ ಅಪಘಾತದಿಂದ ನನಗೆ ಯಾವುದೇ ಮೂಳೆ ಮುರಿತ ಆಗಿರುವುದಿಲ್ಲ, ಕೇವಲ ತರಚಿದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಈ ಅಪಘಾತದಿಂದ ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ ಮತ್ತು ನನಗೆ ಯಾವುದೇ ರಾಡ್ ಅಳವಡಿಸಿರುವುದಿಲ್ಲ ಎಂದರೆ ಸರಿ. ಅಪಘಾತವಾದ ನಂತರ ನಾನು ಮಧುಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡೆನು. ಮಧುಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ನನಗೆ ಉಚಿತವಾಗಿ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. ನನಗೆ ಆಸ್ಪತ್ರೆಗೆ ರೂ.50,000/- ಖರ್ಚಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಈ ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿರುವುದಿಲ್ಲ, ಕೇವಲ ತರಚಿದ ಗಾಯಗಳಾಗಿದ್ದು, ಇದರಿಂದ ಸಂಪೂರ್ಣವಾಗಿ ಗುಣ ಮುಖನಾಗಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ತಪ್ಪಿನಿಂದಲೇ ಆಗಿರುವುದರಿಂದ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ.30,000/- ದುಡಿಯುತ್ತಿದ್ದ ಬಗ್ಗೆ ಯಾವುದೇ

ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ